# ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ

## ಸುವರ್ಣ ಕರ್ನಾಟಕ-2006

ಸಂ:ಮನಪಾಬ/ನೀಸಶಾ/ನೀಸ-ಸುತ್ತೋಲೆ/34/2003-04 ದಿನಾಂಕ:12.04.2007

## ಪತ್ರಿಕಾ ಪ್ರಕಟಣೆ

ಬಳ್ಳಾರಿ ನಗರದಲ್ಲಿ ನೀರಿನ ಬಳಕೆದಾರರು ಅನಧಿಕೃತವಾಗಿ ನೀರಿನ ಸಂಪರ್ಕಗಳನ್ನು ಪಡೆಯುತ್ತಿರುವುದು ಹೆಚ್ಚಾಗಿರುವುದರಿಂದ ಮಾನ್ಯ ಆಡಳಿತಾಧಿಕಾರಿಗಳು, ಬಳ್ಳಾರಿ ಮಹಾನಗರಪಾಲಿಕೆ, ಬಳ್ಳಾರಿರವರು ತೀರ್ಮಾನ ಸಂಖ್ಯೆ:66, ದಿನಾಂಕ:10.04.2007 ರಲ್ಲಿ ಅನಧಿಕೃತ ನೀರಿನ ಸಂಪರ್ಕಗಳನ್ನು ಪಡೆದಿರುವ ಬಳಕೆದಾರರು 15 ದಿನಗಳೊಳಗಾಗಿ ರೂ.500/-ಗಳ ದಂಡದೊಂದಿಗೆ ಸಕ್ರಮಗೊಳಿಸಿಕೊಳ್ಳಲು ಕಾಲಾವಕಾಶ ನೀಡಲಾಗಿದ್ದು, ತಪ್ಪಿದಲ್ಲಿ ಮಾನ್ಯ ಪೌರಾಡಳಿತ ನಿರ್ದೇಶಕರು, ಬೆಂಗಳೂರುರವರ ಸುತ್ತೋಲೆ ಸಂಖ್ಯೆ:ಪೌನಿ/ತಾಂತ್ರಿಕ/ನೀಸ-ಸುತ್ತೋಲೆ/176/2003-04, ದಿನಾಂಕ:28.11.2003 ರವರ ನಿರ್ದೇಶನದಂತೆ ನಿಗಧಿತ ಕಾಲಾವಕಾಶದೊಳಗೆ ಅನಧಿಕೃತ ಸಂಪರ್ಕಗಳನ್ನು ಸಕ್ರಮಗೊಳಿಸಿಕೊಳ್ಳಲು ಬಳಕೆದಾರರು ವಿಫಲರಾದಲ್ಲಿ ರೂ.5000/-ಗಳ ಅಧಿಕ ದಂಡವನ್ನು ವಿಧಿಸಲು ಆದೇಶಿಸಿರುತ್ತಾರೆ. ಅಂತೆಯೇ ನಗರದ ಸಾರ್ವಜನಿಕರು ಅನಧಿಕೃತವಾಗಿ ಪಡೆದಿರುವ ನೀರಿನ ಸಂಪರ್ಕಗಳನ್ನು ರೂ.500/-ಗಳ ದಂಡದೊಂದಿಗೆ ಈ ಪ್ರಕಟಣೆಯ 15 ದಿನಗಳೊಳಗಾಗಿ ಸಕ್ರಮಗೊಳಿಸಿಕೊಳ್ಳಲು ನೀಡಲಾದ ಕಾಲಾವಕಾಶದ ಸಂಪೂರ್ಣ ಉಪಯೋಗ ಪಡೆಯಲು ತಿಳಿಸಲಾಗಿದೆ. ಅನಧಿಕೃತ ನೀರಿನ ಸಂಪರ್ಕ ಪಡೆದ ಬಳಕೆದಾರರು ನಿಗಧಿತ ಅವಧಿಯೊಳಗೆ ಸಕ್ರಮಗೊಳಿಸಿಕೊಳ್ಳಲು ವಿಫಲರಾದಲ್ಲಿ ರೂ.5000/-ಗಳ ಅಧಿಕ ದಂಡವನ್ನು ಕೂಡಲೇ ಜಾರಿಗೆ ಬರುವಂತೆ ವಿಧಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

**ಆಯುಕ್ತರು**<br>**ಬಳ್ಳಾರಿ ಮಹಾನಗರ ಪಾಲಿಕೆ,**<br>**ಬಳ್ಳಾರಿ.**